O.S.No.376/15
PW1

ದಿನಾಂಕ 22-08-2019 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಎನ್ ವಕೀಲರಿಂದಃ

ನನಗೆ 4 ಮತ್ತು 5 ನೇ ಪ್ರತಿವಾದಿಗಳು ಸುಮಾರು 15 ವರ್ಷಗಳಿಂದ ಪರಿಚಯವಿದ್ದು, ಅವರು ನನ್ನ ಮನೆಯ ಮುಂಭಾಗದಲ್ಲಿ ವಾಸಿಸುತ್ತಿದ್ದಾರೆ. 4 ಮತ್ತು 5 ನೇ ಪ್ರತಿವಾದಿಯವರ ಜಾಗದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸ.ನಂಃ 12/1 ರಲ್ಲಿ ಎಷ್ಟು ವಿಸ್ತೀರ್ಣದ ಜಾಗ ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಎ ಸೊತ್ತುಗಳು ಒಂದಕ್ಕೊಂದು ತಾಗಿಕೊಂಡಿರುತ್ತವೆ. ನನಗೆ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಮಂಜೂರಾದ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ರಸ್ತೆ ಹಾದು ಹೋಗುತ್ತದೆ. ಅದೇ ರೀತಿ ಮಂಜೂರಾದ ಆಸ್ತಿಯ ದಕ್ಷಿಣ ದಿಕ್ಕಿಗೆ ಪಂಚಾಯತ್ ರಸ್ತೆ ಇದೆ. ಪಂಚಾಯತ್ ರಸ್ತೆ ಮತ್ತು ಸ.ನಂಃ 28/1A ಜಾಗದ ನಡುವೆ ಸರ್ಕಾರಿ ಜಾಗ ಇದೆ ಎಂದರೆ ಸರಿ. ಸ.ನಂಃ 28/1A ನ ಉತ್ತರ ಬದಿಯ ಪಶ್ಚಿಮ ದಿಕ್ಕಿನಲ್ಲಿ ಸ.ನಂಃ 28/1B ಇದೆ ಎಂದರೆ ಸರಿ. ನನ್ನ ಪಟ್ಟಾ ಜಾಗದಿಂದ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಮಂಜೂರಾದ ಜಾಗದ ನಡುವೆ ಸುಮಾರು 400 ಲಿಂಕ್ಸ್ ಅಂತರ ಇದೆ. ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಮಂಜೂರಾಗುವಾಗ ಭೂಮಾಪಕರು ಬಂದು ಸರ್ವೆ ಮಾಡಿದ್ದು ಅದರ ಪ್ರಕಾರ ನನಗೆ ಮಂಜೂರಾಗಿರುತ್ತದೆ. ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಮಂಜೂರಾದ ಆಸ್ತಿಯ ಜಾಗದಿಂದ ಪಂಚಾಯತ್ ರಸ್ತೆಗೆ ಸುಮಾರು 300 ಲಿಂಕ್ಸ್ ದೂರ ಇದೆ. ಪಂಚಾಯತ್ ರಸ್ತೆಯ ಉತ್ತರಕ್ಕೆ ನನ್ನ ಅಕ್ರಮ ಸಕ್ರಮ ಜಾಗದ ನಡುವೆ ಇರುವ ಜಾಗ ಖುಮ್ಕಿ ಜಾಗ ಇದೆ. ಪಂಚಾಯತ್ ರಸ್ತೆಯನ್ನು ಸಾರ್ವಜನಿಕರು ಉಪಯೋಗಿಸುತ್ತಿದ್ದಾರೆ.

ದಾವಾ ಎ ಮತ್ತು ಬಿ ಸೊತ್ತುಗಳಿಗೆ ರಸ್ತೆಯನ್ನು ಬಿಟ್ಟು ಬೇರೆ ಬೇರೆ ಬೇಲಿ ಹಾಕಿರುತ್ತೇನೆ. ದಾವಾ ಎ ಸೊತ್ತುಗಳ ಐಟಂ ನಂಃ 2 ರಲ್ಲಿ ತೋರಿಸಿರುವ ಸ.ನಂಃ 12/1 ಮತ್ತು 22/P3 ಜಾಗಗಳು ನನಗೆ ಮಂಜೂರಾದ ಆಸ್ತಿಗಳು. ನನಗೆ ಮಂಜೂರಾದ ಸ.ನಂಃ 22/P3 ನ 3 ಸೆಂಟ್ಸ್ ಜಾಗದ ಉತ್ತರಕ್ಕೆ ಸ.ನಂಃ 12. ಆ ಸದರಿ ಸ.ನಂಃ 12 ಬೇರೆ ಖುಮ್ಕಿ ಜಾಗವಾಗಿರುತ್ತದೆ. ಅದೇ ರೀತಿ 3 ಸೆಂಟ್ಸ್ ಜಾಗದ ಪಶ್ಚಿಮಕ್ಕೆ ಯಾವ ಸರ್ವೆ ನಂಬರ್ ಇದೆ ಎಂದು ನನಗೆ ಗೊತ್ತಿಲ್ಲ. ದಾವೆ ದಾಖಲಿಸಲು ನಾನು ಮತ್ತು ನನ್ನ ಅಕ್ಕ ಮಾಹಿತಿ ನೀಡಿರುತ್ತೇವೆ. ನನ್ನ ಸ್ವಾಧೀನದಲ್ಲಿರುವ ಜಾಗದ ಸುತ್ತ ಮುತ್ತಲಿನ ಜಾಗಗಳ ವಿವರಗಳು ನನಗೆ ಗೊತ್ತಿಲ್ಲ. ನನಗೆ ಗೊತ್ತಿಲ್ಲದ ವಿಚಾರವನ್ನು ನನ್ನ ವಕೀಲರಿಗೆ ನನ್ನ ಅಕ್ಕ ಮಾಹಿತಿ ನೀಡಿರುತ್ತಾರೆ.

(ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾ.ದಂ. ಬೆಳ್ತಂಗಡಿ